# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 44 ಪ್ರಾ.ಸಾ. : 34**

ಸಾಕ್ಷಿಯ ಹೆಸರು : ರಾಜೇಶ ಸುಬ್ರಾಯ ದೇವಾಡಿಗ

**ದಿನಾಂಕಃ 15.10.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ.ಎಲ್.ಎಸ್.ಕೆ., ವಕೀಲರಿಂದ**

25. ದಿನಾಂಕ 23.10.2018 ರಿಂದ 26.10.2018 ರವರೆಗೆ ತನಿಖೆಗೆ ಏನಾದರು ಸಹಾಯ ಮಾಡಿದ್ದೀರಾ ಎಂದರೆ ಸಾಕ್ಷಿಯು ದಿನಾಂಕ 23.10.2018 ಹಾಗೂ 26.10.2018 ರಂದು ತನಿಖೆಗೆ ಸಹಾಯ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 26.10.2018 ರಂದು ಠಾಣೆಯಿಂದ ನಾನು, ತನಿಖಾಧಿಕಾರಿಗಳು, ಸಿಪಿಸಿ-1618, ಸಿಪಿಸಿ-737, ಸಿಪಿಸಿ-952, ಇಬ್ಬರು ಪಂಚರು ಹಾಗೂ ಇಬ್ಬರು ಆರೋಪಿತರೊಂದಿಗೆ ವಾಹನದಲ್ಲಿ ಹೋಗಿರುತ್ತೇವೆ. ಯಾವ ಯಾವ ವಾಹಗಳಲ್ಲಿ ಹೋಗಿದ್ದೀರಿ ಎಂದರೆ ಸಾಕ್ಷಿಯು ಜೀಪ್ ನಲ್ಲಿ ತನಿಖಾಧಿಕಾರಿಗಳು, ಇಬ್ಬರು ಪಂಚರು, ಹಾಗೂ ಇಬ್ಬರು ಆರೋಪಿತರು ಮತ್ತು ಟಿಟಿ ವಾಹನದಲ್ಲಿ ನಮ್ಮ ಪೊಲೀಸ್ ಸಿಬ್ಬಂದಿಗಳು ಇದ್ದೆವು. ನಾವು ಗಣೇಶಗುಡಿ ಸೇತುವೆ ಬಳಿ ಹೋದಾಗ ಬೆಳಿಗ್ಗೆ 8.15 ಗಂಟೆ ಆಗಿತ್ತು. ಕಾರವಾರ ಶಹರ ಠಾಣೆಯಿಂದ ಗಣೇಶಗುಡಿ ಸೇತುವೆ ಎಷ್ಟು ದೂರ ಇರುತ್ತದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಗಣೇಶಗುಡಿ ಸೇತುವೆಯ ಪಶ್ಚಿಮ ದಿಕ್ಕಿಗೆ ಸೂಪಾ ಡ್ಯಾಂ ಇರುತ್ತದೆ ಎಂದರೆ ಸಾಕ್ಷಿಯು ಪೂರ್ವ ದಿಕ್ಕಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಕಾಳಿ ನದಿಯು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತದೆ. ಗಣೇಶಗುಡಿಯ ಸೇತುವೆ ಸುಮಾರು 150 ರಿಂದ 200 ಅಡಿ ಉದ್ದ ಇರುತ್ತದೆ. ಸದರಿ ಸೇತುವೆಯ ಕೆಳಗೆ ನೀರು ಹರಿಯುವ ಸ್ಥಳದಲ್ಲಿ ಆಳ ಇರುತ್ತದೆ ಎಂದರೆ ಸರಿ. ಎಷ್ಟು ಅಡಿ ಆಳ ಇರುತ್ತದೆ ಎಂದು ಹೇಳಲು ಬರುವುದಿಲ್ಲ. ಗಣೇಶಗುಡಿ ಸೇತುವೆಯಿಂದ ನೀರು ಹರಿಯುವ ಕೆಳಗಿನ ಭಾಗದಲ್ಲಿ ಜಲ ಸಾಹಸ ಕ್ರೀಡೆಗಳ ಜಾಗ (Water activities adventure) ಮಾಡಿರುತ್ತಾರೆ ಎಂದರೆ ಸಾಕ್ಷಿಯು ಸೇತುವೆಯಿಂದ ಬಹಳಷ್ಟು ದೂರದಲ್ಲಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

26. ನಾವು ಗಣೇಶಗುಡಿ ಸೇತುವೆಯ ಬಳಿ ಹೋದಾಗ ಕಾಳಿ ನದಿಯ ನೀರಿನ ಹರಿವು ಹೆಚ್ಚು ಇರುತ್ತದೆ. ಕೃತ್ಯಕ್ಕೆ ಬಳಸಿದ ಕತ್ತಿಗಳು, ಮೃತನ ಬಟ್ಟೆಗಳು, ಪರ್ಸ್ ಹಾಗೂ ಕಣ್ಣಿಗೆ ಕಟ್ಟಿದ್ದ ಬಟ್ಟೆಗಳನ್ನು ಸೇತುವೆಯ ಮೇಲಿಂದ ಸೂಪಾ ಡ್ಯಾಂ ಕಡೆಗೆ ಎಸೆಯಲಾಗಿತ್ತು. ಕತ್ತಿ ಹಾಗೂ ಬಟ್ಟೆಗಳನ್ನು ಹುಡುಕಾಡುವ ಸಮಯದಲ್ಲಿ ನಮ್ಮ ಪೊಲೀಸ್ ಸಿಬ್ಬಂದಿಗಳು ಯಾರು ನೀರಿನಲ್ಲಿ ಇಳಿದಿರಲಿಲ್ಲ. ಸೇತುವೆಯಿಂದ ಮುಂದೆ ಇರುವ adventure ಗಳ ನಡುವೆ ದೊಡ್ಡ ಬಂಡೆಗಳಿದ್ದು ಅಲ್ಲಿ ನೀರು ನಿಂತು ನಂತರ ಸಣ್ಣ ಕಿಂಡಿಗಳ ಮೂಲಕ ನೀರು ಕೆಳಗೆ ಹರಿದು ಹೋಗುತ್ತದೆ ಎಂದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸೇತುವೆ ಬಳಿ ಬಿಟ್ಟು ನಾವು ಬೇರೆ ಎಲ್ಲೂ ಹುಡುಕಾಟ ನಡೆಸಿಲ್ಲ ಎಂದರೆ ಸಾಕ್ಷಿಯು ಸೇತುವೆಯಿಂದ ಬಹಳ ದೂರದವರೆಗೆ ಮುಳುಗು ತಜ್ಞರ ಮೂಲಕ ಹುಡುಕಾಟ ನಡೆಸಿರುತ್ತೇವೆ ಆದರೆ ಎಷ್ಟು ದೂರ ಎಂದು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ವಸ್ತುಗಳನ್ನು ಹುಡುಕಾಡುವ ಸಮಯದಲ್ಲಿ 4 ಜನ ಮುಳುಗು ತಜ್ಞರನ್ನು ಕರೆಸಿದ್ದೆವು. ಹುಡುಕಾಟ ನಡೆಸಿದ ನಂತರ ಮುಳುಗು ತಜ್ಞರು ತನಿಖಾಧಿಕಾರಿಗಳ ಬಳಿ ಏನು ಹೇಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿ ನೀರಿನ ರಭಸ ಇರುವ ಕಾರಣ ಮುಳುಗು ತಜ್ಞರ ಮೂಲಕ ಸದರಿ ವಸ್ತುಗಳನ್ನು ಹುಡುಕಾಟ ನಡೆಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸುಮಾರು 5 ತಾಸುಗಳ ನಂತರ ನೀರಿನಲ್ಲಿ ಹುಡುಕಾಟ ನಡೆಸಿದ ನಂತರ ಒಂದು ಕತ್ತಿ ಸಿಕ್ಕಿರುತ್ತದೆ. ಕಾರವಾರದ ಕಡೆಯಿಂದ ಹೋದಾಗ ಗಣೇಶಗುಡಿ ಸೇತುವೆಯ 4 ಮತ್ತು 5 ನೇ ಪಿಲ್ಲರಗಳ ಮಧ್ಯದಲ್ಲಿ ಕತ್ತಿ ಸಿಕ್ಕಿರುತ್ತದೆ. ಸದರಿ ಕತ್ತಿ ಸಿಕ್ಕಿದ ನಂತರವೂ ಸಹ ನಾವು ಸುಮಾರು 2½ ಯಿಂದ 3 ಗಂಟೆಗಳ ಕಾಲ ಹುಡುಕಾಟ ನಡೆಸಿರುತ್ತೇವೆ. ನಿ.ಪಿ.7 ಕತ್ತಿ ಪಂಚನಾಮೆಯನ್ನು ಗಣೇಶಗುಡಿ ಸೇತುವೆಯ ಬಳಿ ಟೈಪ್ ಮಾಡಿರುತ್ತೇನೆ ಆದರೆ ಸ್ಥಳದಲ್ಲಿ ಪಂಚರ ಸಹಿಗಳನ್ನು ಪಡೆದುಕೊಂಡಿರುವುದಿಲ್ಲ. ನಿ.ಪಿ.4 ಫೋಟೊವನ್ನು ತೆಗೆದಾಗ ಬೆಳಿಗ್ಗೆ 8.30 ಗಂಟೆ ಆಗಿರುತ್ತದೆ, ನಿ.ಪಿ.5 ಫೋಟೊವನ್ನು ತೆಗೆದಾಗ ಮಧ್ಯಾಹ್ನ 1.15 ರಿಂದ 1.30 ಗಂಟೆ ಆಗಿರುತ್ತದೆ. ನಿ.ಪಿ.4 ಫೋಟೊದಲ್ಲಿ 2 ನೇ ಆರೋಪಿಯು ಕೈ ತೋರಿಸುತ್ತಿರುವ ದಿಕ್ಕಿಗೆ ಸೂಪಾ ಡ್ಯಾಂ ಇರುತ್ತದೆ. ನಿ.ಪಿ.5 ಫೋಟೊ ನೀರು ಹರಿಯುವ ದಿಕ್ಕು ಇರುತ್ತದೆ. ನಿ.ಪಿ.5 ಫೋಟೊದಲ್ಲಿ ನಿಂತ ಜನರ ಪೈಕಿ 4 ಜನರು ಕತ್ತಿಗಾಗಿ ಹುಡುಕಾಟ ನಡೆಸಿರುತ್ತಾರೆ. ನಿ.ಪಿ.5 ಫೋಟೊದಲ್ಲಿ ಕತ್ತಿಗಾಗಿ ಹುಡುಕಾಟ ನಡೆಸಿದ ಜನರನ್ನು ಗುರುತಿಸಲು ಬರುತ್ತದೆಯಾ ಎಂದರೆ ಸಾಕ್ಷಿಯು 2 ಜನರನ್ನು ಮಾತ್ರ ಗುರುತಿಸಲು ಆಗುತ್ತದೆ ಎಂದು ನುಡಿಯುತ್ತಾರೆ. ನಿ.ಪಿ.5 ಫೋಟೊದಲ್ಲಿ ಕಾಣುತ್ತಿರುವ ಜನರಲ್ಲಿ ಯಾರೂ ಸಹ ಲೈಫ್

ಜಾಕೇಟನ್ನು ಧರಿಸಿಲ್ಲ ಎಂದರೆ ಸರಿ. ನಾವು ಗಣೇಶಗುಡಿ ಸೇತುವೆಯ ಬಳಿ ಹೋಗಿ ಕತ್ತಿಗಾಗಿ ಹುಡುಕಾಟ ನಡೆಸಿದ್ದೆವು ಎಂದರೆ ಸರಿಯಲ್ಲ. ನಾವು ಠಾಣೆಯಿಂದಲೇ ಹೋಗುವಾಗ ಒಂದು ಕತ್ತಿಯನ್ನು ತೆಗೆದುಕೊಂಡು ಹೋಗಿ ಸದರಿ ಕತ್ತಿಯನ್ನು ನೀರಿನಿಂದ ತೆಗೆಯಲಾದ ಕತ್ತಿಯನ್ನು ಸುಳ್ಳು ಪಂಚನಾಮೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕತ್ತಿ ಹುಡುಕಾಟಕ್ಕೆ ಯಾವುದೇ ಜನರನ್ನು ಕರೆಯಿಸದೇ ಇದ್ದರೂ ಮುಳುಗು ತಜ್ಞರನ್ನು ಕರೆಸಿದ್ದೆವು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಣೇಶಗುಡಿ ಸೇತುವೆ ಬಳಿ ಒಟ್ಟಾರೆಯಾಗಿ ಕೆಲಸ ಮುಗಿಸಿದ ನಂತರ ಸಂಜೆ 4 ಗಂಟೆ ಆಗಿರುತ್ತದೆ.

27. ಗಣೇಶಗುಡಿ ಸೇತುವೆಯಿಂದ ದಾಂಡೇಲಿಗೆ ಸುಮಾರು 15 ರಿಂದ 16 ಕಿ.ಮಿ ಆಗುತ್ತದೆ. ಗಣೇಶಗುಡಿಯಿಂದ ದಾಂಡೇಲಿಗೆ ಹೋಗುವಾಗ ಯಾವ ಮಾರ್ಗವಾಗಿ ಹೋಗಿದ್ದೆವು ಎಂದು ನೆನಪಿಲ್ಲ. ಗಣೇಶಗುಡಿ ಸೇತುವೆಯಿಂದ ದಾಂಡೇಲಿಗೆ 50 ರಿಂದ 60 ಕಿ.ಮಿ ಇದೆ ಎಂದರೆ ನನಗೆ ಮಾಹಿತಿ ಇಲ್ಲ. ನಾವು 3 ನೇ ಆರೋಪಿಯ ಮನೆಯ ಬಳಿ ಹೋಗಿಲ್ಲ ಹಾಗೂ ಆತ ಯಾವುದೇ ವಸ್ತುಗಳನ್ನು ಹಾಜರುಪಡಿಸಿಲ್ಲ, ಮತ್ತು ಅಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಾವು 2 ನೇ ಆರೋಪಿಯ ಮನೆಯ ಬಳಿ ಸಹ ಹೋಗಿಲ್ಲ, ಹಾಗೂ ಆತ ಯಾವುದೇ ಮೊಬೈಲಗಳನ್ನು ಹಾಜರುಪಡಿಸಿಲ್ಲ, ನಾವು ಅಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.7 ಪಂಚನಾಮೆಯನ್ನು ನಾವು ಠಾಣೆಯಲ್ಲಿ ಬರೆದು ಪಂಚರ ಸಹಿಯನ್ನು ಪಡೆದುಕೊಂಡಿದ್ದೇವೆ ಎಂದರೆ ಸರಿಯಲ್ಲ.

28. ದಾಂಡೇಲಿಯಲ್ಲಿ ಪಂಚನಾಮೆ ಮಾಡಿದ ನಂತರ ನಾವು ಆ ದಿನ ಅಲ್ಲಿಯೇ ಉಳಿದುಕೊಂಡು ಮರುದಿನ ಅಂದರೆ ದಿನಾಂಕ 27.10.2018 ರಂದು ಖಾನಾಪುರಕ್ಕೆ ಅದೇ ಸಿಬ್ಬಂದಿಗಳೊಂದಿಗೆ ಹಾಗು ಅದೇ ವಾಹನದಲ್ಲಿ ಹೋಗಿರುತ್ತೇವೆ ಆದರೆ ಪಂಚರನ್ನು ವಾಪಾಸ್ಸು ಕಳುಹಿಸಿರುತ್ತೇವೆ. ನಾವು ಖಾನಾಪುರಕ್ಕೆ ತಲುಪಿದಾಗ ಬೆಳಿಗ್ಗೆ 11 ಗಂಟೆ ಆಗಿತ್ತು. ಮುದ್ದೆ ಮಾಲು 11 ಕಾರನ್ನು ಖಾನಾಪುರದ ಪಣಜಿ ಮತ್ತು ಖಾನಾಪುರದ ರಸ್ತೆಯಲ್ಲಿ ಇಂಡಿಯನ್ ಗ್ಯಾರೇಜ್ ಬಳಿ ನಿಲ್ಲಿಸಲಾಗಿತ್ತು. ಕಾರು ನಿಲ್ಲಿಸಿದ್ದ ಸ್ಥಳ ಯಾರಿಗೆ ಸೇರಿದೆ ಎಂಬುವುದರ ಬಗ್ಗೆ ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಕಾರನ್ನು ನಿಲ್ಲಿಸಿಟ್ಟ ಸ್ಥಳ ಗ್ಯಾರೇಜಿಗೆ ಸಂಬಂಧಪಟ್ಟ ಜಾಗ ಅಲ್ಲ, ಸದರಿ ಕಾರಿನ ಚಾವಿ ಕಾರಿನಲ್ಲಿಯೇ ಇತ್ತು. ಸದರಿ ಕಾರು ಯಾರಿನ ಮಾಲೀಕರು ಯಾರು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಕಾರಿನಲ್ಲಿದ್ದ ಆರ್ ಸಿ ಕಾರ್ಡನ್ನು ಪರಿಶೀಲಿಸಿ ನಂತರ ಅದರಲ್ಲಿದ್ದ ದಾಖಲೆಯ

ಅನುಸಾರ ಮಾಲೀಕರು ಮಹರಾಷ್ಟ್ರದ ಮಾದವ ಗುಜ್ಜಾರ್ ರವರಿಗೆ ಸೇರಿದ ಕಾರು ಆಗಿರುತ್ತದೆ ಎಂದು ನುಡಿಯುತ್ತಾರೆ. ಕಾರಿನಲ್ಲಿದ್ದ ಜಪ್ತುಪಡಿಸಿಕೊಂಡ ದಾಖಲೆಯನ್ನು 2 ನೇ ಆರೋಪಿಯೇ ಇಟ್ಟಿರುತ್ತಾನೆ. ಮುದ್ದೆ ಮಾಲು 11 ಕಾರನ್ನು ದಿನಾಂಕ 27.10.2018 ಕ್ಕಿಂತ ಮೊದಲು ನಾನು ಎಲ್ಲಿಯೂ ನೋಡಿರುವುದಿಲ್ಲ. ಸ್ಥಳದಲ್ಲಿ ಕಾರನ್ನು ಪರೀಶಿಲಿಸಿದಾಗ 2 ನೇ ಆರೋಪಿಗೆ ಸಂಬಂಧಿಸಿದ ಆರ್ ಸಿ ಕಾರ್ಡ ಅಥವಾ ಇನ್ಸೂರೆನ್ಸ ದೊರಕಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು 2 ನೇ ಆರೋಪಿಯೇ ಖರೀದಿ ಮಾಡಿರುತ್ತಾನೆ ಎಂಬ ಬಗ್ಗೆ Form No.29, Form No.30, clearance certificate, ಬೆಳಗಾವಿಯ ಶಾಂತೇಶ್ ಮೋಟರ್ಸ ನ ವೆಹಿಕಲ್ ಫ್ರಿ ಓನ್ ಚೆಕ್ ಲಿಸ್ಟ್ ಮತ್ತು ಕಾರನ್ನು ಖರೀದಿಸಿದ ಬಗ್ಗೆ ಶಾಂತೇಶ್ ಮೋಟಾರ್ಸ ಗೆ ಹಣ ಸಂದಾಯ ಮಾಡಿದ ಬಗ್ಗೆ ಎರಡು ರಶೀದಿಗಳು ದೊರಕಿರುತ್ತದೆ. ಚಾ.ಸಾ.32 ರವರು ಹೇಳಿರುವ ಪ್ರಕಾರ ಸದರಿ ಕಾರು ಅವರ ಗ್ಯಾರೇಜಿನ ಬಳಿ ದಿನಾಂಕ 17.10.2018 ರಿಂದ 27.10.2018 ರವರೆಗೆ ಅಲ್ಲಿಯೇ ಇರುತ್ತದೆ. ಕಾರಿನ ಚಾವಿಯನ್ನು ಕಾರಿನಲ್ಲಿಯೇ ಬಿಟ್ಟಲ್ಲಿ ಅದು ಕಳ್ಳತನವಾಗುತ್ತದೆ ಎಂದರೆ ಸರಿ. ಕಾರು ನಿಲ್ಲಿಸಿದ್ದ ಸ್ಥಳ ಖಾಲಿ ಜಾಗವಾಗಿದ್ದು, ಅದಕ್ಕೆ ಸ್ವಲ್ಪ ದೂರದಲ್ಲಿ ಮನೆ ಹಾಗೂ ಅಂಗಡಿಗಳು ಇರುತ್ತದೆ. ಕಾರಿನ ಬಗ್ಗೆ ನಾವಾಗಲಿ ನಮ್ಮ ತನಿಖಾಧಿಕಾರಿಯಾಗಲಿ ಖಾನಾಪುರ ಪೊಲೀಸ್ ಠಾಣೆಗೆ ಹೋಗಿ ವಿಚಾರಿಸಿಲ್ಲ. 2 ನೇ ಆರೋಪಿಗೂ ಮುದ್ದೆ ಮಾಲು 11 ಕಾರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು 11 ಕಾರನ್ನು ಕಾರವಾರದಿಂದ ತೆಗೆದುಕೊಂಡು ಚಾ.ಸಾ.32 ರವರ ಗ್ಯಾರೇಜ್ ಬಳಿ ಇಟ್ಟು ಅದನ್ನು ಜಪ್ತುಪಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ವಾಹನಕ್ಕೆ ಸಂಬಂಧಪಟ್ಟ ದಾಖಲೆಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಆ ದಿನ ಜಪ್ತುಪಡಿಸಿಕೊಂಡ ಕಾರನ್ನು ನಾನು ನ್ಯಾಯಾಲಯದ ಆವರಣದಲ್ಲಿ ನೋಡಿರುತ್ತೇನೆ. ಸದರಿ ವಾಹನವನ್ನು ನೋಡಿದರೆ ಅದು ಅಪಘಾತಕ್ಕಿಡಾದ ವಾಹನದಂತೆ ಕಾಣುತ್ತದೆ ಎಂದರೆ ಸರಿಯಲ್ಲ. ನಿ.ಪಿ.35 ಮತ್ತು 36 ಫೋಟೊದಲ್ಲಿ ಕಾಣುತ್ತಿರುವ ಕಾರಿಗೂ ಹಾಗೂ ಈಗ ನ್ಯಾಯಾಲಯದ ಮುಂದೆ ಇರುವ ಕಾರಿಗೆ ಸಾಕಷ್ಟು ವ್ಯತ್ಯಾಸ ಇರುತ್ತದೆ ಎಂದರೆ ಸಾಕ್ಷಿಯು ಸಾಕಷ್ಟು ವ್ಯತ್ಯಾಸ ಇರುವುದಿಲ್ಲ ಆದರೆ ಮೇಲ್ನೊಟಕ್ಕೆ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಈ ನ್ಯಾಯಾಲಯದ ಮುಂದೆ ಇರುವ ಕಾರಿನ ಮುಂಬಾಗ ಸಂಪೂರ್ಣ ಜಖಂ ಗೊಂಡಿರುತ್ತದೆ ಎಂದರೆ ಸಾಕ್ಷಿಯು ಸಂಪೂರ್ಣ ಜಖಂ ಗೊಂಡಿರುವುದಿಲ್ಲ ಆದರೆ ಅದನ್ನು ಖಾನಾಪುರದಿಂದ ಇಲ್ಲಿಗೆ ತರುವ ಸಮಯದಲ್ಲಿ ಮುಂಬಾಗ ಸ್ವಲ್ಪ ಜಖಂ ಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಮುದ್ದೆ ಮಾಲು-11 ಕಾರನ್ನು ತರುವಾಗ ಅದು ಚಾಲು ಸ್ಥಿತಿಯಲ್ಲಿ ಇತ್ತು ಎಂದರೆ ಸರಿಯಲ್ಲ. ನಾವು ಖಾನಾಪುರಕ್ಕೆ ಹೋಗಿ ಅಲ್ಲಿ ಚಾ.ಸಾ. 32 ರವರ ಗ್ಯಾರೇಜಿನ ಬಳಿ ಮುದ್ದೆ ಮಾಲು-11 ಕಾರನ್ನು ಹಾಗೂ ಕಾಗದ ಪತ್ರಗಳನ್ನು ಜಪ್ತುಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

29. ದಿನಾಂಕ 27.10.2018 ರಂದು ಚಾ.ಸಾ.32 ರವರ ಮೊಬೈಲ್ ಪಡೆದುಕೊಂಡು ಅದರಲ್ಲಿದ್ದ ಕರೆ ಸಂಭಾಷಣೆಯನ್ನು ಲಾಪ್ ಟಾಪ್ ಗೆ ವರ್ಗಾಯಿಸಿ, ಸಿಡಿ ತಯಾರಿಸಿ, ಪಂಚನಾಮೆ ಮಾಡಿ ಸದರಿ ಸಿಡಿಯನ್ನು ತನಿಖಾಧಿಕಾರಿಗೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.32 ರವರ ಮೊಬೈಲ್ ಫೋನನ್ನು ತನಿಖಾಧಿಕಾರಿ ಜಪ್ತುಪಡಿಸಿಕೊಂಡಿರುವುದಿಲ್ಲ. ದಿನಾಂಕ 28.10.2018 ರಂದು 2 ಮತ್ತು 3 ನೇ ಆರೋಪಿಗಳನ್ನು ಕರೆದುಕೊಂಡು ಸಂಡೆ ಮಾರ್ಕೆಟಿಗೆ ಯಾವ-ಯಾವ ವಾಹನದಲ್ಲಿ ಯಾರು ಯಾರು ಹೋಗಿದ್ದೀರಿ ಎಂದರೆ ಸಾಕ್ಷಿಯು ಒಂದೇ ವಾಹನದಲ್ಲಿ ನಾನು, ತನಿಖಾಧಿಕಾರಿ, 2 ಮತ್ತು 3 ನೇ ಆರೋಪಿ, ಸಿ.ಹೆಚ್.ಸಿ-1666, ಸಿಪಿಸಿ-811 ರವರು ಹೋಗಿರುತ್ತೇವೆ. ನಾವು ಸಂಡೆ ಮಾರ್ಕೆಟಿನಲ್ಲಿರುವ ಚಾ.ಸಾ.31 ರವರ ಅಂಗಡಿ ಪೂಜಾ ಸಾಮ್ಾಗ್ರಿಗಳನ್ನು ಮಾರುವ ಅಂಗಡಿ ಆಗಿರುತ್ತದೆ ಎಂದರೆ ಸಾಕ್ಷಿಯು ಪೂಜಾ ಸಾಮಾನಿನೊಂದಿಗೆ, ಕತ್ತಿಗಳು, ತೆಂಗಿನ ಕಾಯಿ ತುರಿಯುವ ಮಣೆ, ಗುದ್ದಲಿ, ಪಿಕ್ಕಾಸಿ ಹಾಗೂ ಇತರೆ ಸಾಮಾನುಗಳು ಸಹ ಮಾರಾಟ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸಂಡೆ ಮಾರ್ಕೆಟಿಗೆ ಹೋದಾಗ ಮಧ್ಯಾಹ್ನ ಸುಮಾರು 12.20 ನಿಮಿಷ ಆಗಿರಬಹುದು. ನಾವು ಹೋಗಿದ್ದ ಸಂಡೆ ಮಾರ್ಕೆಟಿನಲ್ಲಿ ಚಾ.ಸಾ.31 ರವರ ಅಂಗಡಿ ಅಲ್ಲದೆ ಇನ್ನೂ ಉಳಿದ 2-3 ಅಂಗಡಿಗಳಲ್ಲಿ ಕತ್ತಿಗಳನ್ನು ಮಾರುತ್ತಾರೆ. ನಾವು ಸಂಡೆ ಮಾರ್ಕೆಟಿಗೆ ಹೋಗಿಲ್ಲ ಹಾಗೂ ಚಾ.ಸಾ.31 ರವರ ಅಂಗಡಿಯ ಬಳಿ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಸ್ವ-ಖುಷಿ ಹೇಳಿಕೆಯಲ್ಲಿ ತಾವು ಮೊದಲು ಕತ್ತಿಯನ್ನು ಸುರೇಶ ಆಚಾರಿಯವರ ಮನೆಯಲ್ಲಿ ಖರೀದಿ ಮಾಡಿರುತ್ತೇವೆ ಎಂದು ಹೇಳಿರುತ್ತಾರೆ. ಆರೋಪಿತರು ಕತ್ತಿ ಖರೀದಿಸಿದ ಬಗ್ಗೆ ಯಾವುದೇ ಸ್ವ-ಖುಷಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚರಣೆಯ ಪ್ಯಾರ ನಂಬರ 10 ರಲ್ಲಿ ಕುಂಬಾರವಾಡದಲ್ಲಿ ಕತ್ತಿ ಖರೀದಿ ಮಾಡಿರುವುದಾಗಿ ತಪ್ಪಾಗಿ ನಮೂದಾಗಿರುತ್ತದೆ. ಸಾಕ್ಷಿಯು ಮುಂದುವರೆದು ಕುಂಬಾರವಾಡ ರಸ್ತೆಯ ಅಂಬೋಲಿಯಲ್ಲಿ ಎಂದು ನಮೂದಾಗಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿರುವಂತೆ ಮುಖ್ಯ ವಿಚಾರಣೆಯಲ್ಲಿ ದಾಖಲು ಮಾಡಲಾಗಿರುತ್ತದೆ ಎಂದರೆ ಸರಿ. ಆರೋಪಿತರು ನಮ್ಮನ್ನು ಕುಂಬಾರವಾಡಕ್ಕೆ ಕರೆದುಕೊಂಡು ಹೋಗಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಕುಂಬಾರವಾಡದ ಚಾ.ಸಾ.29 ರವರ ಮನೆಯಲ್ಲಿ ಕಬ್ಬಿಣಂದ ಪಟ್ಟಿಯನ್ನು ಕೊಟ್ಟು ಕತ್ತಿ

ಮಾಡಲು ಹೇಳಿ ಹೋಗಿದ್ದರು ಎಂದು ಚಾ.ಸಾ.29 ರವರು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಚಾ.ಸಾ. 29 ರವರು ಕತ್ತಿ ತಯಾರಿಲ್ಲದ ಕಾರಣ 2 ಮತ್ತು 3 ನೇ ಆರೋಪಿತರು ಬೇರೊಂದು ಕತ್ತಿಯನ್ನು ಖರೀದಿ ಮಾಡಿಕೊಂಡು ಹೋಗಿದ್ದರು ಹಾಗೂ ಅವರು ಇದೇ ಕಬ್ಬಿಣದ ಪಟ್ಟಿಯನ್ನು ಕೊಟ್ಟು ಹೋಗಿದ್ದರು ಎಂದು ಹೇಳಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಚಾ.ಸಾ. 29 ರವರ ಮನೆಗೆ ಹೋದಾಗ ಅಲ್ಲಿ ಬಹಳಷ್ಟು ಕಬ್ಬಿಣದ ಪಟ್ಟಿಗಳು ಇದ್ದವು ಎಂದರೆ ಸರಿಯಲ್ಲ. ಚಾ.ಸಾ.29 ರವರ ಮನೆಯ ಬಳಿ ಪಂಚನಾಮೆ ಮಾಡಿದೆವು ಹಾಗೂ ಕಬ್ಬಿದ ಪಟ್ಟಿಯನ್ನು ಜಪ್ತುಪಡಿಸಿಕೊಂಡೆವು ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

30. ದಿನಾಂಕ 31.10.2018 ರಂದು ಶವ ಪರೀಕ್ಷೆ ಕಾಲಕ್ಕೆ ಸಂಗ್ರಹಿಸಿದ ವಸ್ತುಗಳ ಬಗ್ಗೆ ಯಾವುದೇ ಜಪ್ತುಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕಣದ ಸಾಕ್ಷಿದಾರರ ಹೇಳಿಕೆಗಳನ್ನು ಗಣಕೀಕೃತ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ತನಿಖೆಗೆ ಯಾವುದೇ ಸಹಾಯ ಮಾಡದೆ ಇದ್ದರೂ ಸಹ ಮೇಲಾಧಿಕಾರಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ನೇ ಆರೋಪಿತನ ಪರ ಶ್ರೀ.ಎ.ಎ.ಎ., ವಕೀಲರಿಂದ**

31. ನಿ.ಪಿ 39 ರಂತೆ ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಧ್ವನಿ ಸಂಭಾಷಣೆಯನ್ನು ಸಿಡಿಗೆ ವರ್ಗಾಯಿಸಿ ಅದನ್ನು ಜಪ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ನೇ ಆರೋಪಿತನ ಪರ ಶ್ರೀಮತಿ.ಎಸ್.ಎಸ್.ಜಿ., ವಕೀಲರಿಂದ**

32. 4 ಮತ್ತು 5 ನೇ ಆರೋಪಿತರ ಸ್ವ-ಖುಷಿ ಹೇಳಿಕೆಗಳನ್ನು ಗಣಕೀಕೃತ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಯು 2 ಮತ್ತು 3 ನೇ ಆರೋಪಿತರ ಮೂಲಕ ಪ್ರೇಮ್ ಕುಮಾರ್ ನನ್ನು ಕೊಲೆ ಮಾಡಿಸಿದ ವಿಷಯವು 4 ಮತ್ತು 5 ನೇ ಆರೋಪಿತರಿಗೆ ತಿಳಿದಿದ್ದರೂ ಸಹ ಅವರು 1 ನೇ ಆರೋಪಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 5 ನೇ ಆರೋಪಿತನ ಪರ ಶ್ರೀ.ಹೆಚ್.ಎಸ್.ಎಸ್., ವಕೀಲರಿಂದ**

4 ನೇ ಆರೋಪಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ